IJFANS INTERNATIONAL JOURNAL OF FOOD AND NUTRITIONAL SCIENCES

ISSN PRINT 2319 1775 Online 2320 7876

*Research paper* © 2012 IJFANS. All Rights Reserved, UGC CARE Listed ( Group -I) Journal Volume 4, Issu 1, 2015

# ಜಾಗತೀಕರಣ ಸಂದರ್ಭದ ಕನ್ನಡ ಸಣ್ಣ ಕಥಾ ಸಾಹಿತ್ಯದಲ್ಲಿ ವೈಚಾರಿಕ ಪ್ರಜ್ಞೆ

ಡಾ.ನಾಗರೆಡ್ಡಪ್ಪ ಹೆಚ್

ಕನ್ನಡ
ಸಂಶೋದಕರು

**ಸರಾಂಶ**

‘ವೈಚಾರಿಕತೆ ಹೆಣ್ಣಿನ ಮನೋಧರ್ಮವಲ್ಲ’ ವೆಂಬ ಪೂರ್ವ ರಹಿತವನ್ನು ಅಲ್ಲಗಳೆದಿದ್ದಾರೆ. ಹಾಗಾಗಿ ಕಥಾಸಾಹಿತ್ಯವು ಪುರುಷರ ಪರಧಾನವಾದ ನೆಲೆಗಳನ್ನು ಪರಶ್ನಿಸುವುದರ ಮೂಲಕ ಪರಂಪರೆಯಲ್ಲಿರುವ ಅನರ್ಥಗಳನ್ನು, ನಿಷಿದ್ದಗಳನ್ನು ಅರ್ಥೈಸುವ ಪ ಪ್ರಕ್ರಿಯೆಯಲ್ಲಿ ತೊಡಗಿದೆ. ಸ್ತಿಯರ ಹೀನಾಯ ಸ್ಥಿತಿಗೆ ಕಾರಣವಾದ ಪರಂಪರೆಯ ಚಾರಿತ್ರಿಕ ಸಂಗತಿಗಳ ಅರಿವಿನೊಂದಿಗೆ ಮಹಿಳೆಯರ ಸಮಸ್ಯೆಗಳನ್ನು ವಿಶ್ಲೇಷಿಸಲಾಗಿದೆ. ದಲಿತಪರ ಕಾಳಜಿಗಳು ಹಾಗೂ ಮಹಿಳಾ ಹೊಸ ಸಾಧ್ಯತೆಗಳಿಂದ ಇಲ್ಲಿನ ಕಥೆಗಳ ವಸ್ತು ಹೊಸ ಆಯಾಮ ಪಡೆದುಕೊಂಡಿವೆ. ೯೦ರ ದಶಕದಿಂದೀಚೆಗೆ ವೈಚಾರಿಕತೆಯಲ್ಲಿ ಗಮನಾರ್ಹ ಬದಲಾವಣೆಗಳಾಗಿದೆ. ಗ್ರಾಮೀಣ ಬದುಕಿನ ಬಡತನ, ಮೌಢ್ಯತೆ, ಜೀವನೋತ್ಸಾಹದಂತಹ ವಿಷಯಗಳು ಇಲ್ಲಿಯ ಕಥೆಗಳಿಗೆ ಪರಮುಖ ವಸ್ತುಗಳಾಗಿವೆ. ಗ್ರಾಮೀಣ ಬದುಕಿನ ದಲಿತರ ಜೀವನಾನುವದ ಒಳನೋಟಗಳನ್ನು ಬಿಚ್ಚಿಡುವಲ್ಲಿ ಕಥಾ ಸಂಕಲನಗಳು ಯಶಸ್ವಿಯಾಗಿದೆ. ಅಲ್ಲದೆ ಜಾತಿಯ ನಡುವೆ ಬದುಕಿನ ಸಂಘರ್ಷವನ್ನು ಸೂಕ್ಷ್ಮವಾಗಿ ತಿಳಿದುಬರುತ್ತದೆ.

ಪ್ರಮುಖ ಪದಗಳು: ವೈಚಾರಿಕ ಕಥೆಗಳು, ಜಾಗತೀಕರಣ, ಧಾರ್ಮಿಕ ಪ್ರಜ್ಞೆ, ಸಾಮಾಜಿಕ ಪ್ರಜ್ಞೆ, ರಾಜಕೀಯ ಪ್ರಜ್ಞೆ. ಹಾಗೂ ಗ್ರಾಮ ಮತ್ತು ನಗರ ಕೇಂದ್ರಿತ ಜೀವನ : ವೈಚಾರಿಕ ಸ್ವರೂಪ

## ಪ್ರಸ್ತಾವನೆ

ಜಾಗತೀಕರಣ ಸಂದರ್ಭದ ಕನ್ನಡ ಸಣ್ಣ ಕಥಾ ಸಾಹಿತ್ಯದಲ್ಲಿ ಪ್ರತಿಪಾದನೆಗೊಂಡ ‘ವೈಚಾರಿಕತೆ’ಯನ್ನು ಸಮಗ್ರವಾಗಿ ಪರಿಶೀಲಿಸುವುದು ಈ ಲೇಖನದ ಮುಖ್ಯ ಉದ್ದೇಶವಾಗಿದೆ. ಸಾಮಾಜಿಕ, ಸಾಂಸ್ಕೃತಿಕ, ಧಾರ್ಮಿಕ ಹಾಗೂ ರಾಜಕೀಯದ ಹಿನ್ನಲೆಯಲ್ಲಿ ಮೂಡುವ ವೈಚಾರಿಕ ಸಂಘರ್ಷಗಳನ್ನು ಕುರಿತು ವಿವೇಚಿಸುವುದಾಗಿದೆ. ಕನ್ನಡ ಸಾಹಿತ್ಯಕ್ಕೆ ಹೊಸ ವೈಚಾರಿಕ ಆಯಾಮಗಳನ್ನು ಪರಿಚಯಿಸಿದ ಮುಂಬೈ



IJFANS
International Journal of
Food And Nutritional Sciences
Official Publication of International Association of Food and Nutrition Scientists

ISSN PRINT 2319 1775 Online 2320 7876

Research paper © 2012 IJFANS. All Rights Reserved, UGC CARE Listed ( Group -I) Journal Volume 4, Issu 1, 2015

ಕರ್ನಾಟಕ ಕಥಾ ಸಾಹಿತ್ಯ, ಕರಾವಳಿ ಕಥಾ ಸಾಹಿತ್ಯ, ಹೈದರಾಬಾದ್ ಕರ್ನಾಟಕ ಕಥಾ ಸಾಹಿತ್ಯ, ಮೈಸೂರು ಪ್ರಾಂತ್ಯದ ಕಥಾ ಸಾಹಿತ್ಯ, ಕೊಡಗು ಕಥಾ ಸಾಹಿತ್ಯವನ್ನು ಅವುಗಳ ವಸ್ತುವಿನ ನೆಲೆಯಿಂದ ವಿಶ್ಲೇಷಿಸುತ್ತಾ ವಿಶೇಷ ಅಧ್ಯಯನ ಮಾಡುವುದರಿಂದ ಕನ್ನಡ ಕಥಾ ಸಾಹಿತ್ಯದ ಅನನ್ಯತೆಯ ಮೇಲೆ ಇನ್ನಷ್ಟು ಬೆಳಕು ಚೆಲ್ಲಲ್ಲು ಸಾಧ್ಯವಾಗುತ್ತದೆ. ಪ್ರಾದೇಶಿಕವಾರು ವರ್ಗೀಕರಣದ ಹಿನ್ನಲೆಯಲ್ಲಿ ಹೈದರಬಾದ್ ಕರ್ನಾಟಕದ ಕಥೆಗಾರರ ಪಟ್ಟಿಯಲ್ಲಿ ಅಮರೇಶ ನುಗಡೋಣಿ, ಬಾಲಚಂದ್ರ ಜಯಶೆಟ್ಟಿ, ಗೀತಾ ನಾಗಭೂಷಣ, ಬಿ.ಟಿ. ಲಲಿತಾನಾಯಕ, ನೀಲಾ. ಕೆ, ಸಿದ್ದರಾಮ ಹೊನ್ಕಲ್, ಸೂಗಯ್ಯ ಹಿರೇಮಠ ಮುಂತಾದ ಕಥೆಗಾರರನ್ನು ಕಾಣಬಹುದು. ಮುಂಬೈ ಕಥೆಗಾರರಲ್ಲಿ ಶ್ರೀನಿವಾಸ ಹಾವನೂರ, ಶ್ರೀನಿವಾಸ್ ಜೋಕಟ್ಟೆ, ಓಂದಾಸ್ ಕಣ್ಣಂಗಾರ್ ಮುಂತಾದವರನ್ನು ಕಾಣಬಹುದು. ಅದೇ ರೀತಿ ಕರಾವಳಿ ಕಥೆಗಾರರಾದ ಗಂಗಾ ಪಾದೇಕಲ್, ಪ್ರೇಮಾಭಟ್, ಮಿತ್ರಾ ವೆಂಕಟ್ರಾಜ್, ವೈದೇಹಿ, ಸಾರಾ ಅಬೂಬಕ್ಕರ್ ಪ ್ರಮುಖರಾಗಿದ್ದಾರೆ. ಸುಮಂಗಲಾ, ಸುನಂದಾ ಪ್ರಕಾಶ ಕಡಮೆ, ಜಾಹ್ನವಿ ಬಿ.ಟಿ, ನೇಮಿಚಂದ್ರ, ಮೊಗಳ್ಳಿ ಗಣೇಶ್, ಎಂ.ಎಸ್.ವೇದಾ, ರೇಖಾರಾಣಿ, ಶಾಂತಕುಮಾರಿ, ಮುಂತಾದ ಕಥೆಗಾರರು ಮೈಸೂರು ಕರ್ನಾಟಕದ ವ್ಯಾಪ್ತಿಗೆ ಒಳಪಟ್ಟವರು. ಇವರೆಲ್ಲರ ಕಥೆಗಳಲ್ಲಿ ಸಂಪ್ರದಾಯದ ಚೌಕಟ್ಟನ್ನು ಮೀರುವ ವೈಚಾರಿಕ ಪ್ರಜ್ಞೆ, ಸಾಮಾಜಿಕ ಸುಧಾರಣೆಯನ್ನು ಕಾಣಬಹುದು. ಅಲ್ಲದೆ ಜಾಗತೀಕರಣ ಸಂದರ್ಭದ ಜ್ವಲಂತ ಸಮಸ್ಯೆಗಳ ಬಗ್ಗೆ ತೀವ್ರವಾದ ಚಿಂತನೆಗಳಿವೆ. ಶೋಷಣೆಯ ವಿವಿಧ ಮುಖಗಳು, ಮೌಢ್ಯತೆಯ ವಿಚಾರಗಳು ಸಣ್ಣಕಥೆಗಳಲ್ಲಿ ಸ್ಫೋಟಗೊಂಡಿವೆ.

ಚ.ನ.ಶಂಕರರಾವ್ ಅವರು ವೈಚಾರಿಕತೆಯ ಮಹತ್ವವನ್ನು ಕುರಿತು ಹೀಗೆ ಹೇಳಿದ್ದಾರೆ. “ಅನುಭವದ ಸ್ವೀಕಾರ ಮತ್ತು ಆಯ್ಕೆಗಳನ್ನು ಲೇಖಕನ ವೈಚಾರಿಕತೆಯು ನಿಯಂತ್ರಿಸುತ್ತದೆ. ಆದ್ದರಿಂದ ಸಾಹಿತ್ಯದಲ್ಲಿ ಶುದ್ದವಾದ ಜೀವನಾನುಭವ ಎಂಬುದು ಸಂದೇಹಾಸ್ಪದ. ಒಂದಲ್ಲಾ ಒಂದು ರೀತಿಯಲ್ಲಿ ಲೇಖಕನು ಜೀವನ ದೃಷ್ಟಿಯಲ್ಲಿನ ಅರ್ಥಪೂರ್ಣತೆಯನ್ನು ಒಳಗೊಂಡೇ ಒಂದು ಅನುಭವ ಸಾಹಿತ್ಯದಲ್ಲಿ ಸ್ಥಾನ ಪಡೆಯುತ್ತಾನೆ. ಇಂಥ ಅನುಭವಗಳ ಆಯ್ಕೆಯಲ್ಲಿ ವೈಚಾರಿಕತೆಯ ಮಹತ್ವದ ಪಾತ್ರವನ್ನು ನಿರ್ವಹಿಸುವುದರಿಂದ ಅನುಭವದ ಮೌಲಿಕತೆಯಲ್ಲಿ ಅದಕ್ಕೆ ವಿಶಿಷ್ಟವಾದ ಪಾಲಿದೆ. ವೈಚಾರಿಕತೆಯು ಲೇಖಕನ ಸ್ವಂತಿಕೆ, ಅರ್ಥಪೂರ್ಣತೆ, ಆಳ, ಗಾಂಭಿರ್ಯಗಳು ಅನುಭವದ ಮೂಲಕ ಕೃತಿಯ ಯಶಸ್ಸಿನ ಮೇಲೆ ಪರಿಣಾಮ ಬೀರಬಲ್ಲವು.”(ಚ.ನ.ಶಂಕರರಾವ್) ಈ ಮಾತಿನ ಮೂಲಕ ಕಥೆಗಾರರು ಸಮಾಜದ ಸಮಸ್ಯೆಗಳನ್ನು ವೈಚಾರಿಕವಾಗಿ ಪ್ರತಿಪಾದಿಸುತ್ತಾರೆ. ಇಡೀ ವ್ಯವಸ್ಥೆಯನ್ನೇ ಪ್ರಶ್ನಿಸುವ ಮತ್ತು ವೈಚಾರಿಕ ನೆಲೆಯಲ್ಲಿ ಆಲೋಚಿಸುವ ಕ್ರಮವನ್ನು ಜಾಗತೀಕರಣ ಸಂದರ್ಭದ

ISSN PRINT 2319 1775 Online 2320 7876

Research paper © 2012 IJFANS. All Rights Reserved, UGC CARE Listed ( Group -I) Journal Volume 4, Issu 1, 2015

ಕಥೆಗಾರರಲ್ಲಿ ಕಾಣಬಹುದು. ಸಂಪ್ರದಾಯವನ್ನು ಮುರಿದು ಸಾಮಾಜಿಕವಾಗಿ ಒಳ್ಳೆಯ ಮೌಲ್ಯಗಳನ್ನು ಎತ್ತಿ ಹಿಡಿಯುವುದು ವೈಚಾರಿಕತೆಯ ನಿಲುವುವಾಗಿದೆ. ಹಾಗಾಗಿ ಜಾಗತೀಕರಣ ಸಂದರ್ಭದ ಕಥೆಗಾರರು ನಿಜದನಿಯನ್ನು ಬೆರೆಸಿ ಸಮಾಜಕ್ಕೆ ಒಪ್ಪಿತವಾಗುವಂತೆ ಬರೆಯುವ ಎಚ್ಚರವನ್ನು ರೂಢಿಸಿಕೊಂಡಿದ್ದಾರೆ. ಅಲ್ಲದೇ ಇಲ್ಲಿ ದಲಿತ ಸಂಸ್ಕೃತಿಯ ಸಂವೇದನೆಗಳನ್ನು ಕಾಣಬಹುದು. ಮಾನವೀಯ ಮೌಲ್ಯಗಳ ವಿವೇಚನೆಯಿಂದ ಓದುಗರ ಗಮನ ಸೆಳೆಯುವ ಕಥೆಗಳಿವೆ. ಸಾಂಪ್ರದಾಯಿಕ ಕಥನ ಕ್ರಮಕ್ಕಿಂತ ತೀರಾ ಭಿನ್ನವಾಗಿವೆ. ಹೇಳಿಕೊಳ್ಳಲಾರದ ಮನದಾಳದ ನೋವುಗಳಿಗೆ ಜಾಗತೀಕರಣ ಸಂದರ್ಭದ ಕಥೆಗಾರರು ಧ್ವನಿಯಾಗಿದ್ದಾರೆ. ಜೊತೆಗೆ ಜಾಗತೀಕರಣ ಸಂದರ್ಭದ ವೈಜ್ಞಾನಿಕ-ವೈಚಾರಿಕತೆಯ ವಿಚಾರಗಳು ಒಂದಕ್ಕೊಂದು ವಿರುದ್ಧ ದಿಕ್ಕಿನಲ್ಲಿ ಮುಖಾಮುಖಿಯಾಗಿಸುವ ಸಮನ್ವಯಶೀಲತೆಯನ್ನು ಸಾಧಿಸಿದ್ದಾರೆ.

ಜಾಗತೀಕರಣ ಸಂದರ್ಭದ ಸಣ್ಣಕಥೆಗಾರರು ತಮ್ಮ ಬರವಣಿಗೆಯಲ್ಲಿ ಜಾಗತೀಕರಣದ ಪರಿಣಾಮಗಳನ್ನು ಬಿಂಬಿಸಲು ಪ್ರಯತ್ನಿಸಿದ್ದಾರೆ. ಹೊಸ ಸಾಂಸ್ಕೃತಿಕ ರಚನೆಯ ಸೂಕ್ಷ್ಮತೆಗಳು ಹೇಗೆ ನಮ್ಮ ಬದುಕನ್ನು ಪ್ರಭಾವಿಸಿವೆ ಎಂಬುದನ್ನು ಇತ್ತೀಚಿನ ಕಥೆಗಳು ಸಾಂಪ್ರದಾಯಿಕ ಕಥನ ಕ್ರಮಕ್ಕಿಂತ ತೀರಾ ಭಿನ್ನವಾಗಿ ಅಭಿವ್ಯಕ್ತಿಸಿವೆ. ಯಜಮಾನ ಸಂಸ್ಕೃತಿಯೊಂದನ್ನು ಅಪವಿತ್ರಗೊಳಿಸುತ್ತಲೂ ಏಕಕಾಲದಲ್ಲಿಯೇ ಕಿರು ಸಂಸ್ಕೃತಿಯಲ್ಲಿರುವ ಮಿತಿಗಳನ್ನು ಮೀರುತ್ತಲೂ ಅತ್ಯಂತ ಮಾನವೀಯವೂ, ವೈಚಾರಿಕತೆಯೂ ಆದ ಜನಸಂಸ್ಕೃತಿಯ ನಿರ್ಮಾಣ ಮಾಡುತ್ತಾ ಜಾಗತೀಕರಣ ಸಂದರ್ಭದ ಕಥೆಗಳು ಸಾಗಿವೆ. ಸಾಮಾಜಿಕ ನಂಬಿಕೆ, ಸಂಪ್ರದಾಯಗಳ ಹಿನ್ನೆಲೆಯಲ್ಲಿ ಶ್ರೀಸಾಮಾನ್ಯರ ಮೇಲಾಗುವ ಶೋಷಣೆಯ ವಿವಿದ ಮುಖಗಳನ್ನು ಬಯಲಿಗೆಳೆದು ಪ್ರತಿಭಟಿಸುವ ದಿಟ್ಟತನವನ್ನು ಹೊಸತಲೆಮಾರಿನ ಕಥೆಗಾರರು ತಮ್ಮ ಕಥೆಗಳಲ್ಲಿ ಅಭಿವ್ಯಕ್ತಿಸಿರುವುದನ್ನು ಇಲ್ಲಿ ಗಮನಿಸಬಹುದು. ಜಾಗತೀಕರಣ ಸಂದರ್ಭದ ಕನ್ನಡ ಸಣ್ಣ ಕಥಾ ಸಾಹಿತ್ಯವನ್ನು ವೈಚಾರಿಕತೆಯ ದೃಷ್ಟಿಕೋನದಿಂದ ಅವಲೋಕಿಸುವುದರಿಂದ ಅದಗ ಹೊಸ ಹೊಸ ವಿನ್ಯಾಸಗಳು ಹಾಗೂ ಆಯಾಮಗಳು ಗೋಚರವಾಗುತ್ತವೆ. ಅದೂ ಅಲ್ಲದೆ ಅದರ ಸಂರಚನೆ, ವೈರುಧ್ಯಗಳು ಸ್ಪಷ್ಟವಾಗುತ್ತವೆ.

ರಾಜಕೀಯ, ಆರ್ಥಿಕ, ಶೈಕ್ಷಣಿಕ ಹಾಗೂ ಸಾಮಾಜಿಕ ಪರಕ್ರಿಯೆಗಳಲ್ಲಿ ನಿರಂತರವಾದ ವೈಚಾರಿಕ ಮಾದರಿಗಳು ಹುಟ್ಟಿಕೊಳ್ಳುತ್ತಲೇ ಇವೆ. ವೈಚಾರಿಕ ರೂಪಗಳು ಸದಾ ಪುರತಿಮೆಗಳಂತೆ ಕವಲೊಡೆಯುತ್ತವೆ. ಸೃಜನಶೀಲ ಸಾಹಿತ್ಯದಲ್ಲಿ ವೈಚಾರಿಕ ಆಕೃತಿಗಳು ಸೂಕ್ಷ್ಮವಾಗಿ ಲೇಖಕರಿಂದ ಲೇಖಕರಿಗೆ ಬದಲಾಗುತ್ತಾ ಸಾಗುತ್ತವೆ. ಆ ವೈಚಾರಿಕ ಆಕೃತಿಗಳೆಂದರೆ ಧರ್ಮ, ಜಾತಿ ಹಾಗೂ ದೇವರುಗಳ ಹೆಸರಿನಲ್ಲಿ ನಡೆಯುವ ಶೋಷಣೆಗಳು ಹಾಗೂ ಪರಂಪರೆಯ ಗೊಡ್ಡು ಸಂಪ್ರದಾಯಗಳನ್ನು ಧಿಕ್ಕರಿಸಿ ವೈಜ್ಞಾನಿಕ

ISSN PRINT 2319 1775 Online 2320 7876

*Research paper* **© 2012 IJFANS. All Rights Reserved, UGC CARE Listed ( Group -I) Journal Volume 4, Issu 1, 2015**

ಸತ್ಯಗಳ ಸ್ವೀಕಾರ. ಬಡತನ, ಶೋಷಣೆ, ಅಜ್ಞಾನ, ಅಸಮಾನತೆಗಳ ವಿರುದ್ಧದ ಹೋರಾಟಗಳು, ಬಂಡವಾಳಶಾಹಿ ಹಾಗೂ ಅಧಿಕಾರಶಾಹಿ ಪ್ರಭುತ್ವಗಳ ವಿರುದ್ಧದ ಪ್ರತಿಭಟನೆಗಳನ್ನು ಮಾಡುವುದು. ಸಮತಾವಾದ ಹಾಗೂ ಸಮಾಜವಾದ ರಾಷ್ಟ್ರವನ್ನು ನಿರ್ಮಿಸುವುದು. ಪರಂಪರೆಯಲ್ಲಿರುವ ಅನರ್ಥಗಳನ್ನು, ನಿಷಿದ್ಧಗಳನ್ನು ಅರ್ಥೈಸುವ ಪ್ರಕ್ರಿಯೆಯಲ್ಲಿ ತೊಡಗುವುದು. ಇತಿಹಾಸದಲ್ಲಿಯೇ ಬೇರು ಬಿಟ್ಟಿರುವ ಪುರುಷ ಪ ್ರಧಾನವಾದ ನೆಲೆಗಳನ್ನು ಮಹಿಳೆಯರು ಪ್ರಶ್ನಿಸುವ ಸಾಹಸಯಾತ್ರೆಯನ್ನು ಕೈಗೊಳ್ಳುವುದು. ಸಾಮಾಜಿಕ, ಆರ್ಥಿಕ ಹಾಗೂ ರಾಜಕೀಯವಾಗಿ ಶೋಷಣೆಗೆ ಒಳಗಾಗಿರುವ ಸ್ತ್ರಿ ಸಮಾಜದ ಏಳ್ಗೆಯನ್ನು ಬಯಸುವುದು. ವೈದಿಕ ಸಮಾಜದ ಸ್ಥಾಪಿತ ಮೌಲ್ಯಗಳನ್ನು ಹುಡುಕುವ ವೈಚಾರಿಕ ಪ್ರಜ್ಞೆಯನ್ನು ಕಂಡುಕೊಳ್ಳುವುದು ಮುಂತಾದ ಪ್ರಗತಿಪರ ಧೋರಣೆಗಳು ಪರಿಷ್ಕೃತಗೊಂಡು ಜಾಗತೀಕರಣ ಸಂದರ್ಭದ ಸಮೂಹ ಮಾಧ್ಯಮಗಳ ಪ್ರಭಾವದಿಂದ ಚಿಂತನೆಯ ಬಹುರೂಪಗಳು ವಿಸ್ತಾರಗೊಂಡು ಪಶ್ಚಿಮದ ಜೊತೆ ಮುಖಾಮುಖಿಗೊಳ್ಳುತ್ತಿವೆ.

ಕಥೆಗಾರರು ಕೆಟ್ಟ ಸಂಪ ್ರದಾಯಗಳನ್ನು ಸಂಪೂರ್ಣವಾಗಿ ಹೋಗಲಾಡಿಸುವುದು ನಮ್ಮೆಲ್ಲರ ಹೊಣೆ ಎಂಬ ವಿಚಾರವನ್ನು ಮಂಡಿಸಿದ್ದಾರೆ. ಮೌಢ್ಯತೆಯ ವಿರುದ್ಧದ ಮೌನ ಪ್ರತಿಭಟನೆಗಳಿವೆ. ಧರ್ಮದ ಹೆಸರಿನಲ್ಲಿ ನಡೆಯುವ ಮೋಸ, ವಂಚನೆ, ಅನ್ಯಾಯ, ಅತ್ಯಾಚಾರಗಳು ಮುಂತಾದ ಪುರುಷ ಪ್ರಧಾನ ಸಮಾಜದ ಕೆಟ್ಟ ಆಚರಣೆಯ ಕರಾಳ ಚಿತ್ರಣಗಳನ್ನು ಲೇಖಕರು ಅನಾವರಣಗೊಳಿಸಿದ್ದಾರೆ. ಗ್ರಾಮೀಣ ಜನರು ದೇವರು-ಧರ್ಮ ಎಂದರೆ ಹೇಗೆ ಭಯ ಭೀತಿಯಿಂದ ತಲೆಬಾಗುತ್ತಾರೆ ಎನ್ನುವ ಕಟು ಸತ್ಯವನ್ನು ಧ್ವನಿಪೂರ್ಣವಾಗಿ ಪ್ರತಿಪಾದಿಸಿದ್ದಾರೆ.

ನವಜಾಗತೀಕರಣ ಸಂದರ್ಭದಲ್ಲಿ ಈಗಿನ ಕಥೆಗಳು ವಾಸ ್ತವವಾದಿ ಸತ್ಯಗಳನ್ನು ಹೊರಗೆಳೆಯುತ್ತದೆ. ಅವಿಭಕ್ತ ಕುಟುಂಬದಲ್ಲಿ ಮಾನವೀಯ ಸಂಬಂಧಗಳ ಗಟ್ಟಿತನ ನೈತಿಕ ಪ್ರಜ್ಞೆಯೊಂದಿಗೆ ಹೆಣೆಯಲ್ಪಟ್ಟಿತು. ಆದರೆ ಜಾಗತೀಕರಣದ ನಂತರದಲ್ಲಿ ಹಣ ಎಂಬ ಮಾಯಾವಿಯ ಬೆನ್ನು ಹತ್ತಿ ಮನುಷ್ಯನ ಆಪ್ತ ಸಂಬಂಧಗಳು ಶಿಥಿಲವಾಗತೊಡಗಿವೆ. ಆಧುನಿಕವಾದ ನಗರ ಸಂಸ್ಕೃತಿಯಲ್ಲಿ ಕಂಡುಬರುವುದು ಸಾಮಾನ್ಯ ಸಂಗತಿ ಎಂದರೆ ಕುಟುಂಬ ಹಣ-ಮಾನವೀಯತೆ-ಸಂಬಂಧಗಳು ಇವುಗಳ ನಡುವಿನ ಸಂಘರ್ಷದಲ್ಲಿ ಸಂಬಂಧಗಳು ಸೋತು ಕಡೆಯಲ್ಲಿ ಗೆಲ್ಲುವುದು ಹಣವೇ. ಈ ರೀತಿಯ ಜಾಗತೀಕರಣದ ದುಷ್ಪರಿಣಾಮವನ್ನು ಯಥಾವತ್ತಾಗಿ ಚಿತ್ರಿಸಿದ್ದಾರೆ.

ಕಥೆಗಾರರು ತಮ್ಮ ವೈಜ್ಞಾನಿಕ ದೃಷ್ಟಿಕೋನ, ಮಾನವತಾವಾದಿ ನಿಲುವು, ವಾಸ್ತವವಾದಿ ಧೋರಣೆಗಳಿಂದ ತಮ್ಮ ಕಥೆಗಳಲ್ಲಿ ವೈಚಾರಿಕ ಸ್ವರೂಪವನ್ನು ತಂದುಕೊಟ್ಟಿದ್ದಾರೆ. ಜನರ ಮೌಢ್ಯಗಳ ಬಗ್ಗೆಯೂ ವ್ಯಂಗ್ಯವಾಡುತ್ತ ತಿವಿದು

ISSN PRINT 2319 1775 Online 2320 7876

*Research paper* **© 2012 IJFANS. All Rights Reserved,** UGC CARE Listed ( Group -I) Journal Volume 4, Issu 1, 2015

ಎಚ್ಚರಿಸುತ್ತಾರೆ. ಸಾಮಾಜಿಕ, ಧಾರ್ಮಿಕ ಬಹಿಷ್ಕಾರಗಳಿಗೂ ಅಂಜದೆ ಎಲ್ಲರನ್ನು ಉತ್ತಮ ಮನುಷ್ಯರನ್ನಾಗಿ ರೂಪಿಸಲು ಹೊರಟ ರೀತಿ ನಿಜಕ್ಕೂ ಸಾಂಪ್ರದಾಯಿಕ ಸಮಾಜ ರಚನೆಗೆ ಸವಾಲೆಸೆಯುವಂತಹದು. ಬಹುತೇಕ ಕಥೆಗಳಲ್ಲಿ ಸಮಾಜದ ಪ್ರಚಲಿತ ಮೌಲ್ಯಗಳನ್ನು ಚಿಕಿತ್ಸಕವಾಗಿ ಕಾಣುವ, ವಿಡಂಬಿಸುವ, ತಿರಸ್ಕರಿಸುವ ದೃಷ್ಟಿಯಿಂದ ಹುಟ್ಟಿದ ಪ್ರಗತಿಪರ ಮನೋಭಾವವನ್ನು ಕಾಣಬಹುದು. ಕಥೆಗಾರರು ವರ್ತಮಾನದ ವೈಚಾರಿಕ ಕಾಳಜಿಗಳು ಹಾಗೂ ಸಾಹಿತ್ಯಕ ಶೈಲಿಗಳಿಗಿಂತ ಭಿನ್ನವಾಗಿ, ಬದುಕನ್ನು ಕಾಣುವ ತಮ್ಮದೇ ಆದ ದೃಷ್ಟಿಕೋನವನ್ನು ಬರಹಗಳ ಮುಖಾಂತರ ರೂಪಿಸಿಕೊಂಡಿದ್ದಾರೆ. ವೈಚಾರಿಕ ನೆಲೆಗಟ್ಟಿನಲ್ಲಿ ಶೋಷಣೆಯ ವಿರುದ್ಧ ತೀಕ್ಷ್ಣವಾಗಿ ಬರೆಯುವ ಜವಾಬ್ದಾರಿಯುತ ಸಾಹಿತಿಗಳು ಎನಿಸಿಕೊಂಡಿದ್ದಾರೆ.

ವೈಚಾರಿಕ ಪರಜ್ಞೆ ಎನ್ನುವುದು ಸಮಾಜವಾದಿ ರಾಷ್ಟ್ರಗಳ ಸಾಹಿತ್ಯಕ ವಲಯದಲ್ಲಿ ಮೂಡಿ ಬಂದ ಪದ. ಕನ್ನಡದಲ್ಲಿ ನವೋದಯ ಸಾಹಿತ್ಯ ಸಂದರ್ಭದಲ್ಲಿ ವೈಚಾರಿಕ ಪ್ರಜ್ಞೆ ಎಂಬ ಪದ ಸಾಮಾನ್ಯವಾಗಿ ಬಳಕೆಗೆ ಬಂದರೂ ಹೆಚ್ಚು ಕ್ರಿಯಾಶೀಲವಾಗಿ ಬಳಕೆಯಾದದ್ದು ಎಪ್ಪತ್ತು ಎಂಬತ್ತರ ದಶಕದಲ್ಲಿ. ವೈಚಾರಿಕತೆಯು ಸಾಮಾನ್ಯ ಪ್ರಜ್ಞೆಯನ್ನೇ ಪ್ರತಿನಿಧಿಸಿತು. ಅರಿವು, ಜಾಗೃತಿ ಎಂಬರ್ಥದಲ್ಲಿ ಬಳಕೆಯಾಗುವ ಮೂಲಕ ಅದರ ಅರ್ಥ ಚಹರೆಯ ಸಾರ್ಥಕತೆಯನ್ನು ಪ್ರಸ್ತುತಗೊಳಿಸಲಾಯಿತು. ಪ್ರಗತಿಪರತೆಯನ್ನು ಎತ್ತಿ ಹಿಡಿಯುವ ಈ ಪದದ ಅರ್ಥ ಸಂಪ್ರದಾಯಶೀಲರ ಬದ್ಧತೆಯನ್ನೇ ಪ್ರಶ್ನಿಸುವಂತಾಯಿತು. ಆದರೂ ಇಂದಿಗೂ ವೈಚಾರಿಕ ಪ್ರಜ್ಞೆಯನ್ನು ಸರಿಯಾದ ರೀತಿಯಲ್ಲಿ ಅರ್ಥೈಸುವಲ್ಲಿ ಗೊಂದಲಗಳು ಮೂಡಿನಿಂತಿದೆ.

ಸಾಹಿತ್ಯದ ಹಿನ್ನೆಲೆಯಲ್ಲಿ ವೈಚಾರಿಕ ಪ್ರಜ್ಞೆಯನ್ನು ಗಮನಿಸಿದಾಗ ಇದು ಸಾಹಿತ್ಯದ ಮೂಲದ್ರವ್ಯವಾಗಿದೆ ಎಂಬುದು ಸರ್ವವೇದ್ಯ ಸಂಗತಿ. ಸಾಹಿತ್ಯ ಮತ್ತು ವೈಚಾರಿಕತೆಯ ನಡುವೆ ಅವಿನಾಭಾವ ಸಂಬಂಧವಿದೆ. ವೈಚಾರಿಕತೆ ಇಲ್ಲದೇ ಕೇವಲ ಶೂನ್ಯದಿಂದ ಸಾಹಿತ್ಯ ಉದಯಿಸುವುದಿಲ್ಲ ಎಂದಾಗ, ಸಾಹಿತ್ಯದ ಜೀವಾಳ ವೈಚಾರಿಕತೆ ಎಂಬುದಂತೂ ಸತ್ಯ. ಪ್ರಾಚೀನ ಸಾಹಿತ್ಯದಿಂದ ಇಂದಿನ ಸಾಹಿತ್ಯದವರೆಗೆ ಪ್ರತಿ ಹಂತದಲ್ಲೂ ವೈಚಾರಿಕ ಪ್ರಜ್ಞೆಯನ್ನು ಗುರುತಿಸುವ ಕಾರ್ಯ ನಡೆದಿದೆ. ಆದರೆ ಪರಜ್ಞೆಯ ಆಳದಲ್ಲಿಳಿದಾಗ ಅದರ ವಿಭಿನ್ನ ನೆಲೆಗಳು ಕೂಡ ಮುಖ್ಯವಾಗುತ್ತದೆ.

ಒಟ್ಟಾರೆ ಜಾಗತೀಕರಣದ ಭರಾಟೆಯಲ್ಲಿ ಮನುಷ್ಯ ಕಳೆದುಹೋಗಿ ಏಕಾಂಗಿಯಾಗಿ ಅನಾಥವಾಗಿಬಿಡುತ್ತಾನೆ. ಇದರಿಂದ ಹೊರತರಲು ಜಾಗತೀಕರಣ ಸಂದರ್ಭದ ಕಥಾ ಸಾಹಿತ್ಯ ಮುಂದಾಗಿದೆ. ಜಾಗತೀಕರಣದ ಹಳ್ಳಿಯ ಕಲ್ಪನೆಗಿಂತ ನಮ್ಮ ಸ್ಥಳೀಯತೆಯ

ISSN PRINT 2319 1775 Online 2320 7876
Research paper © 2012 IJFANS. All Rights Reserved, UGC CARE Listed ( Group -I) Journal Volume 4, Issu 1, 2015

ವಾಸ್ತವ ಹೆಚ್ಚು ಆಪ್ತವಾಗಿ ಜಾಗೃತವಾಗುತ್ತಿದೆ. ಇವೆಲ್ಲವುಗಳ ಒಳನೋಟವನ್ನು ಜಾಗತೀಕರಣ ಸಂದರ್ಭದ ಸಣ್ಣಕಥೆಗಳು ವ್ಯಕ್ತಪಡಿಸುತ್ತವೆ.

**ಧಾರ್ಮಿಕ ಪ್ರಜೆ**

ಧರ್ಮವು ಒಂದು ಸಾರ್ವತ್ರಿಕ ವಿದ್ಯಾಮಾನ. ಜಾಗತಿಕ ಮಾನವನ ಇತಿಹಾಸದೊಂದಿಗೆ ಧಾರ್ಮಿಕ ಇತಿಹಾಸವೂ ಹಾಸುಹೊಕ್ಕಾಗಿದೆ. ಇಂದಿನ ಜಾಗತೀಕರಣ ಸಂದರ್ಭದಲ್ಲೂ ಧರ್ಮವು ತನ್ನ ಅಸ್ತಿತ ್ವವನ್ನು ಕಾಯ್ದುಕೊಂಡಿರುವುದು ನಿಶ್ಚಳ. ಧರ್ಮದ ಕುರಿತಾಗಿ ಸಾಮಾಜಿಕ ಸಂಶೋಧನೆಗಳನ್ನು ಕೈಗೊಂಡವರಲ್ಲಿ ಮೊದಲಿಗರು ಮ್ಯಾಕ್ಸ್ ವೇಬರ್. ಇವರ ಕೃತಿ 'ದಿ ಸೋಶಿಯಾಲಜಿ ಆಫ್ ರಿಲಿಜನ್'. ಇಂದು ಮತಧರ್ಮವನ್ನು ಅಧ್ಯಯನ ಮಾಡಹೊರಟ ವಿದ್ಯಾರ್ಥಿಗಳಿಗೆ ತಮ್ಮ ಅಧ್ಯಯನದ ವ್ಯಾಖ್ಯೆಯೊಂದನ್ನು ಹುಡುಕುವುದು ಅನಿವಾರ್ಯವಾಗಿದೆ. ಭಾರತವು ಬಹು ವೈವಿಧ್ಯತೆಯುಳ ್ಳ ರಾಷ್ಟ್ರ. ಇಲ್ಲಿ ಆನೇಕ ಮತ-ಧರ್ಮಗಳು ಸ್ಥಾಪನೆಗೊಂಡಿವೆ. ನಮ್ಮ ಕವಿಗಳು ಹುಟ್ಟಿ ಬೆಳೆದ ಪರಿಸರದಲ್ಲಿದ್ದ ಮತ-ಧರ್ಮಗಳು ಸಾಹಿತ್ಯ ಕೃತಿಗಳ ವಸ್ತು ಹಾಗೂ ಅಭಿವ್ಯಕ್ತಿಯ ಮೇಲೆ ಪ ್ರಭಾವ ಬೀರಿ ಸಾಹಿತ್ಯ ಪರಂಪರೆಯು ಸಮೃದ್ಧಗೊಳ್ಳಲು ಕಾರಣವಾಗಿವೆ. ಪ್ರಾಚೀನ ಸಾಹಿತ್ಯದ ವಸ್ತುಗಳನ್ನು ಪಟ್ಟಿ ಮಾಡಿದರೆ ಧರ್ಮ-ತತ್ವ ನೀತಿಗಳೇ ಮುಖ್ಯ ವಸ್ತುಗಳಾಗಿ ನಿಂತು ಅವುಗಳನ್ನು ಮುನ್ನಡೆಸಿವೆ. ಜೈನ, ವೀರಶೈವ, ವೈಷ್ಣವ, ಬೌದ್ಧ ಧಮ್ಮಗಳು ಕನ್ನಡ ಸಾಹಿತ್ಯಕ್ಕೆ ಪ್ರೇರಕ ಶಕ್ತಿಗಳಾಗಿ ಕನ್ನಡ ಸಾಹಿತ್ಯದ ಸಮೃದ್ಧಿಗೆ ಕಾರಣವಾಗಿದೆ. ಹಾಗಾಗಿ ಕನ್ನಡ ಸಾಹಿತ್ಯ ಚರಿತ್ರೆಯನ್ನು ಮತ-ಪಂಥಗಳ ಆಧಾರವಾಗಿ ಜೈನಸಾಹಿತ್ಯ, ವೀರಶೈವ ಸಾಹಿತ್ಯ, ವೈಷಣವ ಸಾಹಿತ್ಯ ಎಂದು ವಿಭಾಗಿಸಿ ನೋಡುವ ಪ್ರಯತ್ನಗಳು ನಡೆದಿವೆ.

ಏಕತೆ ಮತ್ತು ಸಮನ್ವಯತೆ ರಾಷ್ಟ್ರೀಯತೆಯ ಲಕ್ಷಣ. ಮತಧರ್ಮ, ಭಾಷೆ, ಜನಾಂಗಿಕ ವಿಷಯಗಳಲ್ಲಿ ಏಕತೆಯನ್ನು ಸಾಧಿಸಿದಾಗ ಮಾತ ್ರ ಭಾರತ ಸಂಪೂರ್ಣ ರಾಷ್ಟ್ರವಾಗಲು ಸಾಧ್ಯ. ಆದರೆ ಧರ್ಮ, ದೇವರು, ನಂಬಿಕೆ, ಆಚರಣೆ, ರೂಢಿ-ಸಂಪರದಾಯಗಳಿಂದ ಜನರಲ್ಲಿ ಕ್ರೌರ್ಯ, ದ್ವೇಷ, ಅಸಹನೆ, ಶೋಷಣೆಗಳು ಹೆಚ್ಚಾಗಿದೆ. ವೈಯಕ್ತಿಕವಾದ ಶ್ರದ್ಧೆ, ಆಸಕ್ತಿಗಳು ಸಾಮೂಹಿಕವಾಗಿ ಬೆಳೆದು ಪರಸ್ಪರ ವೈಮನಸ್ಸುಗಳಿಗೆ ಕಾರಣವಾಗುತ್ತಿವೆ. ಮತ-ಧರ್ಮ, ಭಾಷೆ, ಜನಾಂಗೀಯ ವಿಷಯಗಳಲ್ಲಿ ಏಕತೆಯನ್ನು ಸಾಧಿಸಲಾಗದೆ ಮತೀಯ ಸಂಘರ್ಷಗಳಿಗೆ ಕಾರಣವಾಗುತ್ತಿವೆ. ಮಸೀದಿ, ದೇವಾಲಯ, ಚರ್ಚುಗಳ ನಿರ್ಮಾಣದಿಂದಾಗಿ ಕೋಮು ಸಂಘರ್ಷಗಳು ಉಲ್ಬಣಗೊಳ್ಳುತ್ತಿವೆ. ಜಾಗತೀಕರಣ ಸಂದರ್ಭದ ಪ್ರತಿ ಕಥೆಗಳ ವಸ್ತುವಿನ ಆಯ್ಕೆಯ ಸ್ವರೂಪ ಭಿನ್ನವಾಗಿದ್ದು ಧರ್ಮದ ತಾತ್ವಿಕತೆಯೂ ಬೇರೆ ಬೇರೆ ಬಗೆಯಲ್ಲಿ

ISSN PRINT 2319 1775 Online 2320 7876

Research paper © 2012 IJFANS. All Rights Reserved, UGC CARE Listed ( Group -I) Journal Volume 4, Issu 1, 2015

ಅಭಿವ್ಯಕ್ತಿಗೊಂಡಿವೆ. ಜಾಗತೀಕರಣ ಸಂದರ್ಭದ ಸಣ್ಣ ಕಥಾ ಸಾಹಿತ್ಯದಲ್ಲಿನ ವೈಚಾರಿಕತೆ ಮತ್ತು ಮಹಿಳಾ ವಿಚಾರಗಳನ್ನು ಕುರಿತು ಜಾಗತಿಕ ಕಾಲದ ಹೊಸ ಸಾಧ್ಯತೆಗಳನ್ನು ತೆರೆದು ತೋರಿಸಲಿಕ್ಕೆ ಸಾಧ್ಯವಿದೆ.

**ಸಾಮಾಜಿಕ ಪ್ರಜ್ಞೆ**

ಸಮಾಜವೆಂಬುದು ಮಾನವ ಜೀವನವನ್ನು ನಿಯಂತ್ರಿಸುವ, ನಿರ್ದೇಶಿಸುವ ಒಂದು ವ್ಯವಸ್ಥೆ. ನಿರಂತರತೆಯೇ ಸಮಾಜದ ಜೀವಾಳ. ಸಮಾಜವು ಮಾನವನ ಅಗತ್ಯತೆಗಳನ್ನು ಪೂರೈಸುವುದರ ಜೊತೆಗೆ ಹೊಸ ಪೀಳಿಗೆಗೆ ಬೇಕಾದ ಔಪಚಾರಿಕ ತರಬೇತಿ ಹಾಗೂ ಕೌಶಲಗಳನ್ನು ಕಲಿಸಿಕೊಡುವುದು, ರಕಷಣೆಯನ್ನು ಒದಗಿಸುವುದು ಇತ್ಯಾದಿ ಕಾರ್ಯಚಟುವಟಿಕೆಗಳನ್ನು ನಿರ್ವಹಿಸುತ್ತದೆ. ಸಾಮಾಜಿಕ ಜೀವನದ ಒಳ-ಹೊರಗನ್ನು ನಿಖರವಾಗಿ ಅರ್ಥೈಸಿಕೊಳ್ಳಬೇಕಾದರೆ ಸಮಾಜದ ಅಸ್ತಿತ್ವದ ಮೂಲ ಸಾಂಸ್ಥಿಕ ಶಕ್ತಿಗಳಾದ ಕುಟುಂಬ, ವಿವಾಹ, ಧರ್ಮ, ನಂಬಿಕೆ, ಆಚರಣೆ, ಶಿಕ್ಷಣ, ರಾಜ್ಯ, ಅರ್ಥಿಕತೆ, ಕಾನೂನು ಮುಂತಾದಗಳನ್ನು ಅವಲೋಕಿಸಬೇಕು. ಜಾಗತೀಕರಣ ಸಂದರ್ಭದ ಆಯ್ದ ಸಣ್ಣಕಥೆಗಳನ್ನು ಆಧರಿಸಿ ಸಾಮಾಜಿಕ ನೆಲೆಯ ವೈಚಾರಿಕ ಚಿಂತನೆಯನ್ನು ಚರ್ಚಿಸಲಾಗಿದೆ. ಧರ್ಮ, ದೇವರು, ಸಂಪ್ರದಾಯದ ನಂಬಿಕೆಗಳು, ಆಚರಣೆಗಳು, ಮೌಢ್ಯ, ದೌರ್ಜನ್ಯಗಳು ಹೇಗೆ ಜನಸಾಮಾನ್ಯರನ್ನು ಶೋಷಣೆಗೀಡು ಮಾಡುತ್ತವೆ ಎಂಬುದನ್ನು ಜಾಗತೀಕರಣ ಸಂದರ್ಭದ ಕಥೆಗಳ ಮೂಲಕ ವಿಶ್ಲೇಷಿಸುವುದು.

ಉದಾ: ಬಿ.ಟಿ.ಜಾಹ್ನವಿ ಅವರು ಜಾಗತೀಕರಣ ಸಂದರ್ಭದ ಸಾಮಾಜಿಕ ವಸ್ತುಸಂಗತಿಯನ್ನೇ ತಮ್ಮ ಕಥಾವಸ್ತುವನ್ನಾಗಿಸಿ ಕಥೆಯನ್ನು ಹೆಣೆದ ಮಹಿಳಾ ಕಥೆಗಾರ್ತಿಯರಲ್ಲಿ ಮುಖ್ಯವಾಗಿ ನಿಲ್ಲುತ್ತಾರೆ. ಗ್ರಾಮೀಣ ಪರಿಭಾಷೆ ಮತ್ತು ಪ್ರಾದೇಶಿಕ ಶೈಲಿಯೊಂದಿಗೆ ಕಥೆಯ ಹಂದರವನ್ನು ಹಿಗ್ಗಿಸಿರುವುದು ಅವರ ಕಥಾ ಬರವಣಿಗೆಗೆ ವೈಶಿಷ್ಟ್ಯವಾಗಿದೆ. ಬಿ.ಟಿ. ಜಾಹ್ನವಿ ಅವರ 'ಕಳ್ಳುಬಳ್ಳಿ' ಕಥೆಯು ಜಾಗತೀಕರಣ ಸಂದರ್ಭದಲ್ಲಿ ಹಣವು ವ್ಯಕ್ತಿಯ ಬದುಕಿಗೆ ಎಷ್ಟು ಪ್ರಸ್ತುತ ಮತ್ತು ಅವಶ್ಯಕ ಎಂಬುದರ ಜೊತೆಗೆ ಸಮೃದ್ಧವಾದ ಹಣವನ್ನು ಹೊಂದಿರುವವರು ಬಡವರನ್ನು ಹೇಗೆ ಶೋಷಣೆ ಮಾಡುತ್ತಾರೆ ಎಂಬುದನ್ನು ಈ ಕಥೆಯಲ್ಲಿ ಚಿತ್ರಿಸಿದ್ದಾರೆ. ಬಡವ-ಶ್ರೀಮಂತ ಎಂಬ ಸಂಘರ್ಷ ಇರುವುದು ಜಾತಿ ಜಾತಿಗಳ ನಡುವೆ ಅಲ್ಲ. ಮೇಲ್ಜಾತಿಯ ಕೆಳಜಾತಿಯ ನಡುವೆ ಅಲ್ಲ. ಅದು ಸಂಬಂಧಿಕರಲ್ಲಿ ನಡೆಯುವ ಸಂಪತ್ತಿನ ತಾರತಮ್ಯವನ್ನು ಈ ಕಥೆಯು ವಿಶ್ಲೇಷಿಸುತ್ತದೆ.

**ರಾಜಕೀಯ ಪ್ರಜ್ಞೆ**

ISSN PRINT 2319 1775 Online 2320 7876

Research paper © 2012 IJFANS. All Rights Reserved, UGC CARE Listed ( Group -I) Journal Volume 4, Issu 1, 2015

ಜಾಗತೀಕರಣ ಸಂದರ್ಭದ ಸಣ್ಣ ಕಥಾ ಸಾಹಿತ್ಯದಲ್ಲಿ ಮೂಡುವ ರಾಜಕೀಯ ನೆಲೆಯ ವೈಚಾರಿಕ ಚಿಂತನೆಗಳನ್ನು ಈ ಕೆಳಕಂಡ ಆಯ್ದ ಕಥೆಗಳ ಮೂಲಕ ಚರ್ಚಿಸಲಾಗಿದೆ. ಮುಖ್ಯವಾಗಿ ರಾಜಕೀಯ ಆಯಾಮವುಳ್ಳ ಕಥೆಗಾರರಾದ ಓಂದಾಸ್ ಕಣ್ಣಂಗಾರ್ ಅವರು ಉದಯವಾಣಿ ಪತ್ರಿಕೆಯ ವರದಿಗಾರರಾಗಿ, ಕರ್ನಾಟಕ ಸಂಘದ ಮುಖವಾಣಿ ಸ್ನೇಹ ಸಂಬಂಧದ ಸಂಪಾದಕರಾಗಿ ಸೇವೆ ಸಲ್ಲಿಸಿದ್ದಾರೆ. ಕರ್ನಾಟಕ ಸಂಘದ ಕಾರ್ಯದರ್ಶಿಯಾಗಿ ಕಾರ್ಯನಿರ್ವಹಿಸಿದ್ದಾರೆ. 'ದಂಗೆ'(೨೦೦೨) ಇವರ ಚೊಚ್ಚಲ ಕಥಾಸಂಕಲನ. ಇದರಲ್ಲಿ ಒಂಭತ್ತು ಕಥೆಗಳಿವೆ. 'ದಂಗೆ' ಕಥೆಯಲ್ಲಿ ಚೀಂಕರನು ಸಾಹುಕಾರ ಚಿಕ್ಕಯ್ಯನ ಬಲಗೈ ಬಂಟ. ಸಾಹುಕಾರ ಊರಿನ ಜನರ ಪಾಲಿಗೆ ಸಿಂಹಸ್ವಪ್ನವಾಗಿದ್ದ. ಸಾಹುಕಾರನ ಕಾಮಪಿಪಾಸೆಗೆ ಬಲಿಯಾಗದ ಊರಿನ ಹೆಣ್ಣುಗಳಿಲ್ಲ. ಅಂತೆಯೇ ಆ ಊರಲ್ಲಿ ಅವನ ಕಾಮದೃಷ್ಟಿಗೆ ಬಲಿಯಾಗಿ ನಾಶವಾದ ಕುಟುಂಬಗಳು ಲೆಕ್ಕವಿಲ್ಲ. ಸಾಹುಕಾರ ತನ್ನ ಸಾಕು ಮಗಳನ್ನು ಕೊಂದು ತಾನೂ ನೇಣು ಹಾಕಿಕೊಂಡಾಗ ಚಿಕ್ಕಯ್ಯ ಸಾಹುಕಾರನನ್ನು ಚೀಂಕ್ರನೇ ಕೊಂದನೆಂಬ ಅನುಮಾನದಿಂದ ಊರಿನ ಜನರೆಲ್ಲರೂ ಅವನ ವಿರುದ್ಧ ದಂಗೆ ಏಳುತ್ತಾರೆ. ಸಾಹುಕಾರನ ಅನ್ಯಾಯಗಳನ್ನು ಮೌನದಿಂದಲೇ ಸಹಿಸುತ್ತಾ ಬಂದ ಊರಿನವರು ಈಗ ಕೊಲೆಯ ಆರೋಪ ಹೊತ್ತ ಚೀಂಕ ್ರನ ವಿರುದ್ಧ ಪಂಚಾಯಿತಿ ನಡೆಸುವುದು ಕಥೆಯಲ್ಲಿ ವಿಡಂಬನಾತ್ಮಕವಾಗಿ ಮೂಡಿಬಂದಿದೆ. ಚೀಂಕ ್ರನ ಬಾಯಿಂದ ತಮಗೆ ತಿಳಿಯದ ಸಾಹುಕಾರನ ದುಷ್ಕೃತ್ಯಗಳನ್ನು ಕೇಳಿ ಊರಿಗೆ ಊರೇ ದಂಗಾಗುತ ್ತದೆ. ಅನಾಥೆ ದುಗ್ಗಿಯನ್ನು ಆತ ಸಾಕಿ ಬೆಳೆಸಿದ್ದು ಕೂಡ ಲೈಂಗಿಕಾಸಕ್ತಿಯಿಂದ ಎನ್ನುವ ವಿಷಯ ತಿಳಿದು ಊರಿನವರಿಗೆ ಸಾಹುಕಾರನ ಕುರಿತು ಜಿಗುಪ್ಸೆ ಉಂಟಾಗುತ್ತದೆ. ದುಗ್ಗಿಯನ್ನು ಪ್ರೀತಿಸುತ್ತಿದ್ದ ಚೀಂಕ ್ರನನ್ನು ಕೊಲ್ಲಲ್ಲು ಹೋಗಿ ಸಾಹುಕಾರ ಸ್ವತಃ ತಾನೇ ಜೀವ ತೆತ್ತ ಎನ್ನುವ ವಿಷಯ ತಿಳಿದು ಜನರ ಮನಸ್ಸಿನಲ್ಲಿದ್ದ ಶಂಕೆಗಳು ಮಾಯವಾಗಿ ಚೀಂಕ್ರನ ಕುರಿತು ಜನರಲ್ಲಿ ಗೌರವ ಮೂಡುತ್ತದೆ.

ಆದರೆ ನಿಜಕಥೆಯೇ ಬೇರೆ. ಚೀಂಕ್ರ ಸಾಹುಕಾರ ಚಿಕ್ಕಯ್ಯನ ಪ್ರತಿರೂಪ. ಆತ ದುಗ್ಗಿಯನ್ನು ಬಯಸುತ್ತಿದ್ದರೂ ಆಕೆಯನ್ನು ರಕ್ಷಿಸುವ ಪ್ರಯತ್ನವನ್ನು ಆಕಸ್ಮಿಕವಾಗಿ ಮರಣಿಸಿದ ಸಾಹುಕಾರನನ್ನು ತಾನೇ ಕೊಂದೆ ಎಂದು ಆತ ಹೇಳಿಕೊಳ್ಳುವುದು ರೊಚ್ಚಿಗೆದ್ದ ಊರಜನರಿಂದ ತನ್ನನ್ನು ತಾನು ಬಚಾವು ಮಾಡಿಕೊಳ್ಳಲಿಕ್ಕಷ್ಟೆ. ಓರ್ವ ಸಾಧಾರಣ ವ್ಯಕ್ತಿ ತನ್ನ ಬುದ್ಧಿಶಕ್ತಿಯಿಂದ ದಂಗೆಯಿಂದ ಪಾರಾಗುವ ಈ ಕಥೆಯು ಆರಂಭದಲ್ಲಿ ಸರಳವಾಗಿ ಕಂಡುಬಂದರೂ ಆಕಸ್ಮಿಕ ತಿರುವಿನಿಂದಾಗಿ ಓದುಗರನ್ನು ದಂಗು ಬಡಿಯುವಂತೆ ಮಾಡುತ್ತದೆ. "ಕಥೆಗಾರ ಓಂದಾಸ್ ಇಲ್ಲಿ 'ದಂಗೆ' ಎಂಬ ಪರಿಕಲ್ಪನೆಯನ್ನು ಭಿನ್ನವಾಗಿ ದುಡಿಸಿಕೊಂಡಿದ್ದಾರೆ. ಹೊಸ ರೀತಿಯ ಅರ್ಥೈಸುವಿಕೆ ಇಲ್ಲಿ ಕಂಡುಬಂದಿದೆ. ಇಲ್ಲಿ ದಂಗೆ ಎಂದರೆ ಪ್ರತಿಭಟನೆ, ಬಂಡಾಯ, ಜಿಡ್ಡುಗಟ್ಟಿದ,

ನಿಂತು ನೀರಾದ ವ್ಯವಸ್ಥೆಯ ವಿರುದ್ಧ ಎತ್ತಿದ ಸೊಲ್ಲು ಎಂಬ ಅರಿವು ನಮಗಾಗುತ್ತದೆ" ಎಂದು ಡಾ.ಜಿ.ಎಸ್. ಉಪಾಧ್ಯ ಅವರು ಅರ್ಥೈಸುತ್ತಾರೆ. ಚೀಂಕ ್ರನ ಮೇಲೆ ಸೇಡು ತೀರಿಸಿಕೊಳ ಳಬೇಕೆಂದು ಎಬ್ಬಿಸಿದ ದಂಗೆಗೆ ಅರ್ಥವಿಲ್ಲ. ತಾವು ಸೇಡು ತೀರಿಸಿಕೊಳ್ಳಬೇಕಾದುದು ಚಿಕ್ಕಯ್ಯನಲ್ಲೇ ಹೊರತು ಚೀಂಕ್ರನಲ್ಲಿ ಅಲ್ಲ ಎಂಬ ಅರಿವು ಊರಿನವರಿಗಾಗುತ್ತದೆ. 'ತಾವೆಲ್ಲರೂ ಎಬ್ಬಿಸಿದ ದಂಗೆಗೆ ಅರ್ಥವಿಲ್ಲ. ಅರ್ಥವಿರುವುದು ತಮ್ಮೆಲ್ಲರ ಒಳಿತಿಗಾಗಿ ಹೋರಾಡಿದ ಈ ಚೀಂಕ್ರನನ್ನು ಇಂದಿನಿಂದ ಚಿಕ್ಕಯ್ಯನ ಜಾಗಕ್ಕೆ ತರುವುದರಲ್ಲಿ ಅನಿಸತೊಡಗಿತು' ಎಂದು ಕಥೆಯು ಮುಕ್ತಾಯವಾಗುತ್ತದೆ. ಈ ರೀತಿಯಲ್ಲಿ ಚಿಕ್ಕಯ್ಯನ ಗರಡಿಯಲ್ಲಿ ಪಳಗಿದ ಚೀಂಕ್ರನಿಗೆ ಅಧಿಕಾರ ಒಪ್ಪಿಸುವ ಊರ ಜನರ ಅಮಾಯಕತೆಯತ್ತ, ಗೋಮುಖ ವ್ಯಾಘ್ರ ರಾಜಕಾರಣಿಗಳತ್ತ ಈ ಕಥೆಯು ಬೆರಳು ಮಾಡಿ ತೋರಿಸುತ್ತದೆ. ಶೋಷಿತರ ಶೋಷಣೆಯ ಚಕ್ರವು ನಿರಂತರವಾಗಿ ತಿರುಗುತ್ತಲೇ ಇರುವುದನ್ನು ನಿರ್ಭಾವುಕತೆಯಿಂದ ಚಿತ್ರಿಸಿದ ಒಂದಾಸ್ ಅವರಲ್ಲಿ ಒಳ್ಳೆಯ ಕಥೆಗಾರರ ಲಕ್ಷಣಗಳಿವೆ.

**ಗ್ರಾಮ ಮತ್ತು ನಗರ ಕೇಂದ್ರಿತ ಜೀವನ : ವೈಚಾರಿಕ ಸ್ವರೂಪ**

ಭಾರತವು ಗ್ರಾಮಗಳ ದೇಶವಾಗಿದ್ದು, ಅವು ದೇಶದ ಜೀವನಾಡಿಗಳಾಗಿವೆ. ಭಾರತದಲ್ಲಿನ ಜನಸಂಖ್ಯೆಯ ೩/೪ ರಷ್ಟು ಜನರು ಇಂದಿಗೂ ಗ್ರಾಮಗಳನ್ನೇ ಆಶ್ರಯಿಸಿ ಬದುಕುತ್ತಿದ್ದಾರೆ. ಭಾರತದಲ್ಲಿ ಗ್ರಾಮಗಳ ಪ್ರಸ್ತಾವನೆಯನ್ನು ವೇದಪೂರ್ವಕಾಲದಿಂದಲೂ ಗುರುತಿಸಬಹುದು. ವೇದ ಪೂರ್ವ ಕಾಲಘಟ್ಟದಿಂದಲೂ ಗ್ರಾಮಗಳು ಪುಟ್ಟ ಗಣರಾಜ್ಯಗಳಂತೆ ಕಾರ್ಯನಿರ್ವಹಿಸುತ್ತಿದ್ದವು ಎಂಬುದು ವಿಶೇಷ. ಪ್ರಾಚೀನ ಭಾರತದ ಸಂದರ್ಭದಲ್ಲಿ ಸುಭಿಕ್ಷವಾಗಿದ್ದ ಗ್ರಾಮಗಳು ಮಧ್ಯಕಾಲೀನ ಸಂದರ್ಭದಲ್ಲಿ ಮುಸ್ಲಿಂ ಆಕ್ರಮಣದ ಪರಿಣಾಮವಾಗಿ ಬಡ ಗ್ರಾಮಗಳಾಗಿ ರೂಪುಗೊಂಡವು. ನಂತರ ಭಾರತದ ಗ್ರಾಮಗಳು ಬ್ರಿಟೀಷ್ ಆಕ್ರಮಣ ಹಾಗೂ ಆಳ್ವಿಕೆಯ ದಳ್ಳುರಿಗೆ ಸಿಲುಕಿ ಸ್ವಯಂ ಅಧಿಕಾರವನ್ನು ಕಳೆದುಕೊಂಡು ದುರ್ಬಲವಾಗುತ್ತಾ ಬಂದವು. ಶತಮಾನಗಳು ಉರುಳಿದಂತೆ ಭಾರತದಲ್ಲಿನ ಗ್ರಾಮಗಳ ಚಿತ್ರಣವು ಬದಲಾಗುತ್ತಾ ಬಂದಿದೆ.

ಸ್ವಾತಂತಯದ ನಂತರದ ದಿನಗಳಲ್ಲಿ ಗ್ರಾಮ ಪುನರುತ್ಥಾನಕ್ಕಾಗಿ ಗಾಂಧೀಜಿಯವರ ಗ್ರಾಮಸ ್ವರಾಜ್ಯ ಪರಿಕಲ್ಪನೆಯಂತೆ ಗ್ರಾಮವನ್ನು ದೇಶದ ಪ ್ರಗತಿಯ ಕೇಂದ್ರವನ್ನಾಗಿಸುವ ದೃಷ್ಟಿಯಿಂದ ಗ್ರಾಮಗಳಿಗೆ ಸ್ವಯಂ ಆಡಳಿತದ ಅಧಿಕಾರವನ್ನು ನೀಡಬೇಕು ಎನ್ನುವ ಹಿನ್ನೆಲೆಯಿಂದ ಗ್ರಾಮ ಪಂಚಾಯಿತಿಗಳು ರೂಪುಗೊಂಡಿತ್ತು. ಪ್ರತಿ ಗ್ರಾಮವು ಭಾರೀ ಜನಸಂಖ್ಯೆಯಲ್ಲಿ ಮುಕ್ತ ಹಾಗೂ ಸ್ವಯಂ ಸೇವಕ ಸಂಘಗಳಿಂದ ಕೂಡಿದ್ದು, ಗ್ರಾಮಕ್ಕೆ ಸಂಬಂಧಿಸಿದ ವಿಷಯಗಳನ್ನು ಗ್ರಾಮವಾಸಿಗಳೇ ಪಂಚಾಯಿತ್ತಿ ಮೂಲಕ ಬಗೆಹರಿಸಿಕೊಳ್ಳಬೇಕು ಎಂಬುದು ಗಾಂಧಿಜಿಯ ಪರಿಕಲ್ಪನೆಯ ಆಶಯವಾಗಿತ್ತು.

ISSN PRINT 2319 1775 Online 2320 7876
Research paper © 2012 IJFANS. All Rights Reserved, UGC CARE Listed ( Group -I) Journal Volume 4, Issu 1, 2015

ಪ್ರತಿ ಗ್ರಾಮದ ಬೇಕು ಬೇಡಿಕೆಗಳನ್ನು ಗ್ರಾಮಸ್ಥರೇ ನೋಡಿಕೊಳ್ಳುವ ವ್ಯವಸ್ಥೆಯು ಜಾರಿಗೆ ಬರಬೇಕೆಂಬುದು ಗ್ರಾಮಸ್ವರಾಜ್ಯ ಪರಿಕಲ್ಪನೆಯ ಮೂಲ ಉದ್ದೇಶವಾಗಿತ್ತು. ನೆಹರೂ ಅವರ ಕಾಲದಲ್ಲಿ ಗ್ರಾಮಗಳ ಕಡೆಗಿನ ಲಕ್ಷ್ಯ ಕಡಿಮೆಯಾಯಿತು. ಆಡಳಿತದ ಸೂತ್ರ ಹಿಡಿದಿದ್ದ ನೆಹರೂ ಅವರ ನೋಟ ಬೃಹತ್ ಕೈಗಾರಿಕೋದ್ಯಮದತ್ತ ಹಾಗೂ ಯಾಂತ್ರೀಕರಣದತ್ತ ಹೊರಳಿತು. ಈ ಅವಧಿಯಲ್ಲಿ ನಗರೀಕರಣ ಪ್ರಕ್ರಿಯೆಯು ಆರಂಭಗೊಂಡು ಅನೇಕ ನಗರಗಳು ರೂಪುಗೊಂಡವು.

ಗ್ರಾಮೀಣ ಮತ್ತು ನಗರ ಸಮುದಾಯಗಳು ಭಾರತೀಯ ಸಮಾಜದ ೨ ಪ್ರಮುಖ ಅಂಗಗಳಾಗಿವೆ. ಗ್ರಾಮೀಣ ಸಮುದಾಯವು ನಗರ ಸಮುದಾಯಕ್ಕಿಂತ ಪ್ರಾಚೀನವಾದದ್ದು, ಗ್ರಾಮೀಣ ಸಮುದಾಯದ ನಗರ ಸಮುದಾಯದ ಬೆಳವಣಿಗೆಗೆ ಮೂಲಧಾರವಾಗಿದೆ. ಗ್ರಾಮಗಳು ಬೆಳವಣಿಗೆಯ ಪ್ರಕ್ರಿಯೆಯೊಂದಿಗೆ ಪಟ್ಟಣವಾಗುತ್ತಾ ಬಂದಿವೆ. ಅನಂತರ ಅವುಗಳೇ ನಗರಗಳಾಗಿ ಬೆಳೆದುಬಂದವು. ಈಗಿನ ಬಹುತೇಕ ನಗರಗಳು ಹಿಂದೊಮ್ಮೆ ಹಳ್ಳಿಗಳಾಗಿದ್ದವು. ನಗರಗಳು ಹಳ್ಳಿಗಳ ವಿಸ್ತರಣೆ ಎನ್ನಬಹುದು. ಹಾಗಾಗಿ ಗ್ರಾಮೀಣ ಮತ್ತು ನಗರ ಸಮುದಾಯಗಳು ಒಂದನ್ನೊಂದು ಅವಲಂಭಿಸಿರುತ್ತವೆ. ಸಂಬಂಧಗಳು, ಧರ್ಮ, ನೆರೆಹೊರೆ, ಕುಟುಂಬ ಮುಂತಾದ ಅಂಶಗಳಲ್ಲಿ ಗ್ರಾಮ ಮತ್ತು ನಗರ ಸಮುದಾಯಗಳಲ್ಲಿ ವಿಭಿನ್ನ ಸ್ವರೂಪವನ್ನು ಕಾಣಬಹುದು.

**ಉಪಸಂಹಾರ**

ಜಾಗತೀಕರಣ ಸಂದರ್ಭದ ಸಣ್ಣಕಥೆಗಳನ್ನು ಗಮನಿಸಿದರೆ ಕಥೆಗಳೋ ಅಥವಾ ವೈಚಾರಿಕ ಪ್ರಬಂಧಗಳೋ ಎಂಬ ಸಣ್ಣ ಅನುಮಾನವೂ ಬಂದು ಬಿಡುತ್ತದೆ. ಜಾಗತೀಕರಣ ಉದಾರೀಕರಣಗಳ ಹೆಸರಿನಲ್ಲಿ ಹೇರುತ್ತಿರುವ ಮೌಲ್ಯಗಳು ಮೂಕ ಸಂಸ್ಕೃತಿಯ ಸಮುದಾಯದ ಸಂಕಟವನ್ನು ಸಾವಿರಪಟ್ಟು ಹೆಚ್ಚಿಸುತ್ತಿವೆ. ಪ್ರಗತಿಪರರು ಪ್ರತಿಪಾದಿಸಿಕೊಂಡು ಬಂದ ಸಮಾಜ ಬದಲಾವಣೆಯ ಚಿಂತನಾಕ್ರಮ ಮತ್ತು ಕ್ರಿಯೆಗಳು ಬಿಕ್ಕಟ್ಟಿಗೆ ಒಳಗಾಗಿವೆ. ಜಾಗತೀಕರಣ ಮತ್ತು ಸ್ವದೇಶೀಕರಣದಲ್ಲಿರುವ ಜನವಿರೋಧಿ ನೆಲೆಗಳು ಸಾಮಾಜಿಕ ಸಾಂಸ್ಕೃತಿಕ ಕ್ಷೇತ್ರಕ್ಕೆ ಹೊಸ ಸವಾಲುಗಳನ್ನು ಒಡ್ಡುತ್ತಿರುವ ಇಂದಿನ ಸನ್ನಿವೇಶದ ಕಥಾಸಾಹಿತ್ಯ ಆತ್ಮಾವಲೋಕನ ದೊಂದಿಗೆ ಪುನಶ್ಚೇತನಗೊಳ್ಳುತ್ತಿದೆ.

ಜಾಗತೀಕರಣದ ಪ್ರಭಾವಕ್ಕೊಳಗಾದ ದೇಸಿ ಸಂಸ್ಕೃತಿಯು ವಿನಾಶದ ಅಂಚಿಗೆ ಬಂದಿರುವುದು ವಿಪರ್ಯಾಸದ ಸಂಗತಿಯಾಗಿದೆ. ಕೈಗಾರೀಕರಣ, ನಗರೀಕರಣ, ಶಿಕ್ಷಣ, ಸಮೂಹ ಮಾಧ್ಯಮಗಳು, ಸಾರಿಗೆ ಮತ್ತು ಸಂಪರ್ಕ ಮೊದಲಾದವುಗಳು ಗ್ರಾಮ-ನಗರ ಪ್ರದೇಶಗಳ ಮೇಲೆ ಪರಿಣಾಮ ಬೀರುವುದರ ಮೂಲಕ ಸಂಸ್ಕೃತಿಯ ಬೇರುಗಳನ್ನು ಅಲುಗಾಡಿಸುತ್ತಿವೆ. ಜಾಗತೀಕರಣ ಸಂದರ್ಭದ ಕನ್ನಡ ಸಣ್ಣ ಕಥಾ ಸಾಹಿತ್ಯದಲ್ಲಿ

ISSN PRINT 2319 1775 Online 2320 7876

Research paper © 2012 IJFANS. All Rights Reserved, UGC CARE Listed ( Group -I) Journal Volume 4, Issu 1, 2015

ವ್ಯಕ್ತಗೊಂಡಿರುವ ವೈಚಾರಿಕತೆ ಮತ್ತು ಮಹಿಳೆ ಎಂಬ ಪರಿಕಲ್ಪನೆಯ ಹಿನ್ನೆಲೆಯಲ್ಲಿ ಸಾಂಸ್ಕೃತಿಕ ಸಂಘರ್ಷ ಮತ್ತು ಪಲ್ಲಟಗಳನ್ನು ಪರಿಶೀಲಿಸುವ ಪ್ರಸ್ತುತವೆನಿಸುತ್ತದೆ. ಜಾಗತೀಕರಣ ಸಂದರ್ಭದ ಕತೆಗಳು ಪ್ರಧಾನವಾಗಿ ದಲಿತರ ಸಮಸ್ಯೆ, ಗ್ರಾಮ ಮತ್ತು ಪಟ್ಟಣಗಳ ಸಾಂಸ್ಕೃತಿಕ ಸಂಘರ್ಷ, ಹಳ್ಳಿ ಜೀವನ ಕರಮ, ಭೂ ಗಣಿಗಾರಿಕೆ, ರೈತ ಹೋರಾಟ, ಜಲ ಸಮಸ್ಯೆ ಕಾರ್ಪೊರೇಟ್ ಜಗತ್ತಿನ ಬಿಕ್ಕಟ್ಟು ಮೊದಲಾದವುಗಳನ್ನು ವಾಸ್ತವಯುತವಾಗಿ ಅಭಿವ್ಯಕ್ತಿಸಿವೆ. ಕಥೆಗಾರರು ತನ್ನ ಸುತ್ತಮುತ್ತಲಿನ ಸಮಸ್ಯೆಗಳೆಲ್ಲವನ್ನು ಅರ್ಥೈಸಿಕೊಳ್ಳುವಲ್ಲಿ ಸಾಕಷ್ಟು ಪ್ರಾಮಾಣಿಕೃತವಾಗಿ ಪರಯತ್ನಿಸಿದಲ್ಲದೆ ವಾಸ್ತವಗಳನ್ನು ಮಂಡಿಸುವಲ್ಲಿ ಸಕ್ರಿಯವಾಗಿ ಶರಮ ವಹಿಸಿದ್ದಾರೆ. ಮನುಷ್ಯ ಬದುಕಿನ ಸಂಕಟಗಳ ಜೊತೆಗೆ ಸಣ್ಣಪುಟ್ಟ ಖುಷಿ ಸಂಗತಿಗಳನ್ನು ಹಿಡಿದಿಡುವ ಪರಯತ್ನವಂತೂ ನಡೆದಿದೆ. ಅಷ್ಟೇ ಅಲ್ಲದೆ ಹೆಣ್ಣು-ಗಂಡಿನ ಸಂಬಂಧದ ಸೂಕ್ಷ್ಮಾಂಕಮತಿಸೂಕ್ಷ್ಮಾಂಕಮ ಮಜಲುಗಳನ್ನು ಅದ್ಭುತವಾಗಿ ಸೆರೆಹಿಡಿದಿದ್ದಾರೆ.

## ಪರಾಮರ್ಶನ ಗ್ರಂಥಗಳು


1. ಅನಸೂಯ ಕಾಂಬಳೆ (ಸಂ) : ೧೯೯೯, ವಿಚಾರ ಸಾಹಿತ್ಯ ಮತ್ತು ಹೆಣ್ಣು, ವೈಚಾರಿಕ ಸಾಹಿತ್ಯ ಪ್ರಕಾಶನ. ರಾಯಭಾಗ.
2. ಆಶೋಕ ಟಿ.ಪಿ. : ಸಾಹಿತ್ಯ ಸಂಚಾರ, ಅಕ್ಷರ ಪರಕಾಶನ, ಹೆಗ್ಗೋಡು (ಸಾಗರ)
3. ಆಮೂರ ಜಿ.ಎಸ್ : ಕನ್ನಡ ಕಥನ ಸಾಹಿತ್ಯ : ಸಣ್ಣಕತೆ, ಪ್ರಿತದರ್ಶಿನಿ ಪರಕಾಶನ, ಬೆಂಗಳೂರು.
4. ತಿಪ್ಪೇರುದ್ರಸ್ವಾಮಿ .ಎಚ್ : ೧೯೭೮, ಸಾಮಾಜಿಕ ಮತ್ತು ಸಮಕಾಲೀನ ವಾಸ್ತವಿಕತೆ, ಚಾಮುಂಡಿ ಎಂಟರ್ ಪ್ರೆಸ್ಸಸ್, ಮೈಸೂರು
5. ದಸ್ತಗೀರಸಾಬ್ ದಿನ್ನಿ : ೨೦೦೪, (ಸಂ) ಜಾಗತೀಕರಣ ಮತ್ತು ಸಂಸ್ಕೃತಿ, ಕನಸು ಪ್ರಕಾಶನ, ರಾಯಚೂರು
6. ಪರಭುಶಂಕರ : ೧೯೭೯, ಸಾಹಿತ್ಯ ಮತ್ತು ಆಧುನಿಕತೆ, ಪಸಾರಂಗ ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು.
7. ಬಾಬು .ಎಸ್ : ೨೦೦೨, (ಸಂ) ಜಾಗತೀಕರಣದ ರಾಜಕೀಯ ಮತ್ತು ಕೋಮುವಾದ. ಜನತಂತ್ರ ಪ್ರಕಾಶನ, ಬೆಂಗಳೂರು.
8. ಮಹೇಶನ್ .ಮ : ೨೦೦೨, ಜಾಗತೀಕರಣ, ನವಕರ್ನಾಟಕ ಪ್ರಕಾಶನ, ಬೆಂಗಳೂರು